**ಸಾಕ್ಷಿಯನ್ನು ದಿನಾಂಕಃ 07.01.2025 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ ಜಿ ಆರ್ ಹೆಚ್ ವಕೀಲರಿಂದ

ನನ್ನ ತಂದೆ ಮತ್ತು ಪ್ರತಿವಾದಿಗಳ ತಂದೆ ನಡುವೆ ಆದಂತಹ ವಾಟ್ನಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ವಾಟ್ನಿ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ7(ಎ) ಅಪಸಾತ ವಾಟ್ನಿಯಲ್ಲಿರುವ ಎಲ್ಲಾ ಸಹಿಗಳು ಸುಳ್ಳು ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿರುವ ಪಂಚರ ಸಹಿಗಳು ಖೊಟ್ಟಿ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಪ್ರತಿವಾದಿಗಳ ಸಹಿಗಳು ಇಲ್ಲ ಎಂದರೆ ಸರಿಯಲ್ಲ. ನಿಪಿ7(ಎ) ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರ ಮಧ್ಯೆ ಆದಂತಹ ವಾಟ್ನಿ ಅಲ್ಲ ಎಂದರೆ ಸಾಕ್ಷಿಯು ತನ್ನ ತಂದೆ ಮತ್ತು ತನ್ನ ದೊಡ್ಡಪ್ಪನ ಮಧ್ಯೆ ಆದಂತಹ ವಾಟ್ನಿ ಪತ್ರ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಒಬ್ಬ ತಮ್ಮ ಇದ್ದಾನೆ ಎಂದರೆ ಸರಿ. ಸದರಿ ಅವರನ್ನು ಈ

ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅನುದಾನ ಪಡೆಯುವ ಉದ್ದೇಶದಿಂದ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಲ್ಲಿ ತನಗೆ 4 ಗುಂಟೆ ಬರಬೇಕು ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ಆತನ 3 ಜನ ಸಹೋದರರು ಸೇರಿ ಡೈರಿ ನಮೂದು ಸಂಖ್ಯೆ 370, 761 ಮತ್ತು 505 ರ ಪ್ರಕಾರ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ಸಹ ಸದರಿ ವಾಟ್ನಿಯಲ್ಲಿ ವಿಭಾಗವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ತನ್ನ ತಂದೆಗೆ ಮತ್ತು ಗುಳಪ್ಪನಿಗೆ ಕಡಿಮೆ ವಿಸ್ತೀರ್ಣ ಬಂದ ಕಾರಣ ದಾವಾ ಆಸ್ತಿಯಲ್ಲಿ ಪಾಲು ಕೇಳುತ್ತಿರುವದಾಗಿ ನುಡಿಯುತ್ತಾರೆ. ದಾವಾ ಆಸ್ತಿಯು ಈಗಾಗಲೇ ವಿಭಾಗವಾಗಿರುವುದರಿಂದ ಈ ದಾವೆಯನ್ನು ಹೂಡಲು ಬರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತನ್ನ ಆಸ್ತಿಯನ್ನು 2 ನೇ ಪ್ರತಿವಾದಿಗೆ ಕಾನೂನಾತ್ಮಕವಾಗಿ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಪ್ರತಿವಾದಿಗಳ ಮಕ್ಕಳು ಚಾಲಕರು ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವ್ಯಾಪಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಮಕ್ಕಳ ಅಂಗಡಿಯ ವ್ಯಾಪಾರ ಚೆನ್ನಾಗಿ ನಡೆಯುತ್ತದೆ ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಅವರ ಏಳಿಗೆಯಿಂದ ಹೊಟ್ಟೆಕಿಚ್ಚುಪಟ್ಟು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**